ಓ ಎಸ್ಃ 299/2016

ಪಿ ಡಬ್ಲ್ಯೂ ಃ 2

ದಿನಾಂಕಃ 11.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ವಾಟೀ ಸವಾಲುಃ ಪ್ರತಿವಾದಿ 5 ಮತ್ತು 6 ರವರ ಪರ ಶ್ರೀ ಎಸ್ ಪಿ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳಲ್ಲಿ ಇರುವ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ಸ.ನಂ. 117 ರಲ್ಲಿ ಒಟ್ಟು 23 ಎಕರೆ 1 ಗುಂಟೆ "ಕುಷ್ಕಿ" ಮತ್ತು 2 ಎಕರೆ 3 ಗುಂಟೆ ಖರಾಬು ಇರುತ್ತದೆ. ಸಿದ್ದಬಸವಯ್ಯ ನವರಿಗೆ ಸ.ನಂ. 117 ರಲ್ಲಿ 7 ಎಕರೆ ವಿಭಾಗಪತ್ರದ ಮೂಲಕ ಬಂದಿತ್ತು ಎಂದರೆ ಸರಿ. ಅದೇ ರೀತಿ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದರೆ ಸರಿ .

ಸದರಿ ಭಾಗ ನಮ್ಮ ತಂದೆ ಸಿದ್ದಬಸವಯ್ಯ ಅವರ ಅಣ್ಣ ತಮ್ಮಂದಿರಾದ ರೇಣುಕಪ್ಪ, ಬಳ್ಳಾರಿ ಕಾಳಯ್ಯ , ಬಸವರಾಜು ಮತ್ತು ಮಾದವಯ್ಯ ನವರ ನಡುವೆ ವಿಭಾಗ ಆಗಿತ್ತು. ಈ ದಾವೆಯನ್ನು ಹೂಡುವಾಗ ಗೌರಮ್ಮ ನವರ ಮಾಹಿತಿ ನೀಡುವಾಗ ನಾನು ಅವರ ಜೊತೆ ಇದ್ದೆ. ನಾನು ಈ ದಾವೆಯನ್ನು ಹೂಡುವಾಗ ಪ್ರತಿವಾದಿ 4 ಆಗಿ ಇದ್ದೆ ಎಂದರೆ ಸರಿ. ಸಿದ್ದಬಸವಯ್ಯ ನವರು ಬಂದಂತಹ ಜಮೀನಿನಲ್ಲಿ 1 ಎಕರೆ ಜಮೀನನ್ನು ರೇವಣ್ಣ ನವರಿಗೆ 2005-06 ನೇ ಸಾಲಿನಲ್ಲಿ ಸಿದ್ದಬಸವಯ್ಯ ಮತ್ತು ಅವರ ಕುಟುಂಬಸ್ಥರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಈ ದಾವೆಯನ್ನು ಸ.ನಂ. 117 ರಲ್ಲಿ 1 ಎಕರೆ 23 ಗುಂಟೆ , ಸ.ನಂ. 117/4 ರಲ್ಲಿ 35 ಗುಂಟೆ, ಸ.ನಂ. 117/3 ರಲ್ಲಿ 10 ಗುಂಟೆ, ಮನೆ ನಂಬರ್ 53/52 ರಲ್ಲಿ 40 x 34 ಅಡಿ ಮನೆ ಮತ್ತು ಸ.ನ. 8/3 ರಲ್ಲಿ 80 x 15 ಅಡಿ ಜಾಗಕ್ಕೆ ಈ ದಾವೆಯನ್ನು ಹೂಡಿರುತ್ತೇವೆ. ನಮ್ಮ ತಂದೆಗೆ ವಿಭಾಗದಲ್ಲಿ 7 ಎಕರೆ ಜಮೀನು ಬಂದಿದ್ದರೆ ನಾನು ಈ ದಾವೆಯಲ್ಲಿ ಕೇವಲ 2 ಎಕರೆ ಜಮೀನಿಗೆ ಸಂಬಂದಿಸಿದಂತೆ ವಿಭಾಗ ಕೋರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಮುಂಚೆ ನನಗೂ ಮತ್ತು ನನ್ನ ತಂದೆ ಎಂದು ಹೇಳುವ ಸಿದ್ದಬಸವಯ್ಯ ನವರಿಗೆ ಯಾವುದಾದರೂ ವಿಭಾಗ ಆಗಿತ್ತಾ ಎಂದರೆ ಇಲ್ಲ. ದಾವಾ ಸ್ವತ್ತಿನ 1 ಎಕರೆ 23 ಗುಂಟೆ ಜಮೀನನ್ನು ನಮ್ಮ ತಂದೆಯವರು ಜಯಮ್ಮ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2ನೆ ಐಟಂ ಪ್ರತಿವಾದಿ 7 ರವರಾದ ಶ್ರೀದೇವಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**